ನಿಜವಾದ ಕುಷ್ಠರೋಗಿಗಳು ಇದ್ದರೂ ಸಹ ಅವರನ್ನು ಕ್ಯಾನ್ಸಲ್ ಮಾಡಿದ್ದುದು ಉಂಟು. ಅವರಿಗೆ ಪರಿಹಾರ ಏನು? ಅವರಿಗೆ ಯಾವ ರೀತಿ ಭರವಸೆ ಕೊಡುತ್ತೀರಿ? ಈಗ ಕುಷ್ಠರೋಗ ಇದ್ದಾಗಲೂ ಸಹ ಸುಳ್ಳು ಸರ್ಟಿಫಿಕೇಟ್ ಎಂದು ತಾವು ಕ್ಯಾನ್ಸಲ್ ಮಾಡಿದ್ದೀರಿ ಅವರಿಗೆ ಮುಂದೆ ಉದ್ಯೋಗದ ಭರವಸೆ ಏನಾದರೂ ಕೊಡಲಿಕ್ಕೆ ಸಾಧ್ಯ ಇದೆಯೇ?

ಡಾ॥ ಹೆಚ್. ಸಿ. ಮಹದೇವಪ್ಪ : ಈಗಾಗಲೇ ಕೊಟ್ಟಿದ್ದೇವೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಸುಳ್ಳು ಸರ್ಟಿಫಿಕೇಟ್ ತೆಗೆದುಕೊಂಡು ಕೆಲವು ಜನ ನೌಕರಿಯನ್ನು ಪಡೆದಿಕೊಂಡಿದ್ದರು. ಅದನ್ನು ಕಂಡುಹಿಡಿದು ಅಂತಹ ಸುಳ್ಳು ಸರ್ಟಿಫಿಕೇಟ್‌ಗಳನ್ನು ತೆಗೆದುಕೊಂಡವರನ್ನು ನೌಕರಿಯಿಂದ ವಜಾ ಮಾಡಿದ್ದೇವೆ ಎಂದು ನೀವು ಹೇಳಿದಿರಿ, ಅವರು ಹೇಳುವುದು ನಿಜವಾದಂಥ ಕೆಲವು ಕುಷ್ಠರೋಗಿಗಳನ್ನು ತಾವು ಇದೇ ಗ್ರೌಂಡ್‌ನಲ್ಲಿ ಅಂದರೆ ಅವರು ಕುಷ್ಠರೋಗಿಗಳು ಅಲ್ಲ ಎಂದು ಹೇಳಿ ತಾವು ತೆಗೆದಿದ್ದೀರಿ ಅದಕ್ಕೆ ಏನು ಮಾಡುತ್ತೀರಿ ಎಂದು ಕೇಳುತ್ತಿದ್ದಾರೆ.

ಡಾ॥ ಹೆಚ್.ಸಿ. ಮಹದೇವಪ್ಪ : ಆ ತರಹದ ಕೇಸ್‌ಗಳು ಇದ್ದರೆ ಪರಿಶೀಲನೆ ಮಾಡುತ್ತೇನೆ.

ಅನುದಾನಿತ ತಾಂತ್ರಿಕ ವಿದ್ಯಾಲಯಗಳಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ನೇಮಕ

7 - ಶ್ರೀ ಎ.ಹೆಚ್. ಜಯಪ್ರಕಾಶ್ ನಾರಾಯಣ (ಯಲಹಂಕ) : ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸರ್ಕಾರದಿಂದ ಅನುದಾನ ಪಡೆಯುತ್ತಿರುವ ತಾಂತ್ರಿಕ ಮಹಾವಿದ್ಯಾಲಯಗಳು ಮತ್ತು ಪಾಲಿಟೆಕ್ನಿಕ್‌ಗಳ ಸಂಖ್ಯೆ ಎಷ್ಟು? ಅವುಗಳಲ್ಲಿ ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗಗಳಿಗೆ ಸೇರಿದ ನೌಕರುಗಳ ಸಂಖ್ಯೆ ಎಷ್ಟು ಮತ್ತು ಶೇಕಡವಾರು ಪ್ರಮಾಣವೆಷ್ಟು?

ಆ) ಅನುದಾನ ಪಡೆಯುತ್ತಿರುವ ಈ ಸಂಸ್ಥೆಗಳಲ್ಲಿರುವ ಒಟ್ಟು ಕೆಲಸ ಮಾಡುತ್ತಿರುವ ನೌಕರರೆಷ್ಟು ಹಾಗೂ ಅವರಲ್ಲಿ ಪರಿಶಿಷ್ಟ ಜಾತಿ ಪರಿಶಿಷ್ಟ ವರ್ಗದವರ ಸಂಖ್ಯೆ ಎಷ್ಟು ಬೋಧಕ ಹಾಗೂ ಬೋಧಕರ ಶೇಕಡವಾರು ಪ್ರತ್ಯೇಕ ಪಟ್ಟಿಯನ್ನು ಒದಗಿಸುವುದು)

ಇ) ಈ ಸಂಸ್ಥೆಗಳಲ್ಲಿ ಮೀಸಲಾತಿ ಪ್ರಮಾಣ ಕಡಿಮೆಯಿದ್ದರೆ ಬ್ಯಾಕ್‌ಲಾಗ್ ಹುದ್ದೆಗಳನ್ನು ತುಂಬಲು ಸರ್ಕಾರದವರು ಪರಿಶೀಲಿಸುತ್ತಿರುವರೇ?

ಈ) ಹಾಗಿದ್ದಲ್ಲಿ ಈವರೆವಿಗೂ ಕೈಗೊಂಡಿರುವ ಕ್ರಮಗಳೇನು?

ಶ್ರೀ ಡಿ. ಮಂಜುನಾಥ್ (ಉನ್ನತ ಶಿಕ್ಷಣ ಸಚಿವರು) :

ಅ) 1) ಅನುದಾನಿತ ತಾಂತ್ರಿಕ ಮಹಾವಿದ್ಯಾಲಯಗಳು - 11

2) ಅನುದಾನಿತ ಪಾಲಿಟೆಕ್ನಿಕ್‌ಗಳು - 8

	ಇಂಜಿನಿಯರಿಂಗ್ ಕಾಲೇಜುಗಳು		ಪಾಲಿಟೆಕ್ನಿಕ್‌ಗಳು	
1) ಪರಿಶಿಷ್ಟ ಜಾತಿ	321	20%	110	14 %
2) ಪರಿಶಿಷ್ಟ ವರ್ಗ	70	4.5%	15	2%

ಆ) ಇಂಜಿನಿಯರಿಂಗ್ ಕಾಲೇಜುಗಳು ಪಾಲಿಟೆಕ್ನಿಕ್‌ಗಳು

ಒಟ್ಟು ಬೋಧಕ 799 545

ಸಿಬ್ಬಂದಿ

ಪರಿಶಿಷ್ಟ ಜಾತಿ	178	22%	65	12%
ಪರಿಶಿಷ್ಟ ಪಂಗಡ	51	6%	9	2%
ಒಟ್ಟು ಬೋಧಕೇತರ ಸಿಬ್ಬಂದಿ	745	-	253	-
ಪರಿಶಿಷ್ಟ ಜಾತಿ	143	19%	45	18%
ಪರಿಶಿಷ್ಟ ಪಂಗಡ	19	3%	6	2%

ಇ) ಹೌದು.

ಈ) ಸಂಬಂಧಪಟ್ಟ ಅನುದಾನಿತ ಶಿಕ್ಷಣ ಸಂಸ್ಥೆಗಳು ಬ್ಯಾಕ್‌ಲಾಗ್ ಹುದ್ದೆಗಳನ್ನು ತುಂಬಲು ಕ್ರಮ ಕೈಗೊಳ್ಳುತ್ತಿದೆ.

ಶ್ರೀ ಎಂ.ಹೆಚ್. ಜಯಪ್ರಕಾಶ್ ನಾರಾಯಣ್ : ಮಾನ್ಯ ಅಧ್ಯಕ್ಷರೇ, ಮಾನ್ಯ ಉನ್ನತ ಶಿಕ್ಷಣ ಮಂತ್ರಿಗಳು ಕೇವಲ ಒಂದು ಷೀಟ್‌ನಲ್ಲಿ ನಾಲ್ಕು ಉತ್ತರಗಳನ್ನು ಏನು ಕೊಟ್ಟಿದ್ದಾರೆ, ಆದರೆ ನಾನು ಕೇಳಿದ ಪ್ರಶ್ನೆಯೇ ಕಡಿಮೆ ಇದ್ದರೆ ಬ್ಯಾಕ್‌ಲಾಗ್ ಹುದ್ದೆಗಳನ್ನು ತುಂಬಲು ಸರ್ಕಾರದವರು ಪರಿಶೀಲಿಸುತ್ತಿರುವರೇ ಎಂದು ನಾನು ಕೇಳಲಿಲ್ಲ? ಏನು ಕ್ರಮ ತೆಗೆದುಕೊಂಡಿದ್ದೀರಿ? ಯಾವ ಯಾವ ಕಾಲೇಜುಗಳಲ್ಲಿ ಎಷ್ಟೆಷ್ಟು ಬ್ಯಾಕ್‌ಲಾಗ್ ಹುದ್ದೆಗಳು ಇವೆ ಅವುಗಳ ಪಟ್ಟಿಯನ್ನು ಕೊಡಿ ಎಂದು ಕೇಳಿದ್ದೆ. ಅದನ್ನು ಮಾನ್ಯ ಉನ್ನತ ಶಿಕ್ಷಣ ಮಂತ್ರಿಗಳು ಒದಗಿಸಿಲ್ಲ. ಅದನ್ನು ದಯವಿಟ್ಟು ಒದಗಿಸಬೇಕು. ಜೊತೆಗೆ ಈ ಬ್ಯಾಕ್‌ಲಾಗ್ ಹುದ್ದೆಗಳನ್ನು ಭರ್ತಿಮಾಡತಕ್ಕಂಥ ಸರ್ಕಾರದ ಆದೇಶ ಜಾರಿಗೆ ಯಾವಾಗ ಬಂತು? ಅದು ಬಂದಾಗಿನಿಂದ ಸರ್ಕಾರದವರು ಯಾವ ಯಾವ ವಿದ್ಯಾಸಂಸ್ಥೆಯಲ್ಲಿ ಎಷ್ಟೆಷ್ಟು ಬ್ಯಾಕ್‌ಲಾಗ್ ಹುದ್ದೆಗಳು ಇವೆ, ಅದರಲ್ಲಿ ಎಷ್ಟು ಭರ್ತಿಮಾಡಿದ್ದೀರಿ ಎಂದು ಕೇಳಿದರೆ ಅದಕ್ಕೂ ಉತ್ತರ ಇಲ್ಲ. ಮೂರನೆಯದಾಗಿ, ಅವರು ಕೊಟ್ಟಿರತಕ್ಕಂಥ ಉತ್ತರದಲ್ಲಿ ಈ ಪರಿಶಿಷ್ಟಜಾತಿಯವರು ಇಂಜಿನಿಯರಿಂಗ್ ಕಾಲೇಜುಗಳಲ್ಲಿ ಒಟ್ಟು 321 ಜನ ನೇಮಕವಾಗಿದ್ದಾರೆ. 20 ಪರ್ಸೆಂಟ್ ಹಾಲೀ ಇದ್ದಾರೆ ಎನ್ನತಕ್ಕಂಥ ಉತ್ತರವನ್ನು ಇವರೆ ಹೇಳುವಾಗ ಇನ್ನು ಬ್ಯಾಕ್‌ಲಾಗ್ ಹುದ್ದೆಗಳು ಎಲ್ಲಿ ಬಂತು ಎನ್ನುವ ಪ್ರಶ್ನೆ ಬರುತ್ತದೆ. ಮತ್ತೊಂದು ಕಡೆ ಬೋಧಕ ಸಿಬ್ಬಂದಿಯಲ್ಲಿ 799 ಬೋಧಕವರ್ಗದವರನ್ನು ನೇಮಿಸಿದ್ದೇವೆ ಎಂದು ಹೇಳುತ್ತಾರೆ. ಅದರಲ್ಲಿ ಪರಿಶಿಷ್ಟ ಜಾತಿಯವರಿಗೆ 178 ಎಂದು ಹೇಳಿದ್ದಾರೆ. ಇದರಲ್ಲಿ ಪ್ರೊಫೆಸರ್ ಎಷ್ಟು? ಅಸಿಸ್ಟೆಂಟ್ ಪ್ರೊಫೆಸರ್ ಎಷ್ಟು, ಉಪನ್ಯಾಸಕರು ಎಷ್ಟು ಎನ್ನತಕ್ಕಂಥ ಒಂದು ಮಾಹಿತಿಯನ್ನು ಮಾನ್ಯಮಂತ್ರಿಗಳು ಒದಗಿಸಿಕೊಡಬೇಕು. ಏಕೆಂದರೆ ನಾಲ್ಕನೆ ದರ್ಜೆಯವರನ್ನೆಲ್ಲಾ ಸೇರಿಸಿಬಿಟ್ಟು ಪರಸೆಂಟೇಜ್ ರೈಸ್ ಮಾಡತಕ್ಕಂಥ ಈ ಸರ್ಕಾರದ ನೀತಿಯನ್ನು ಆದಷ್ಟು ಕಡಿಮೆ ಮಾಡಿ ಯಾವ ಯಾವ ವರ್ಗಕ್ಕೆ ಯಾವ ಯಾವ ಕ್ಯಾಟಗರಿಗೆ ಈ ಮೀಸಲಾತಿಯ ನಿಯಮವನ್ನು ಅನುಸರಿಸಬೇಕು ಎನ್ನತಕ್ಕಂಥದ್ದನ್ನು ಸರ್ಕಾರ ಖಚಿತವಾಗಿ ಜಾರಿಗೆ ತರುತ್ತದೆಯೇ ಎಂಬ ಬಗ್ಗೆ ಈ ಮನೆಗೆ ಮಾನ್ಯ ಮಂತ್ರಿಗಳು ಖಚಿತವಾದಿ ಉತ್ತರವನ್ನು ಕೊಡಬೇಕು.

ಅಧ್ಯಕ್ಷರು : ಬಹಳ ವಿವರವಾದ ಪ್ರಶ್ನೆ ಇದಾಗಿದೆ. ಇದನ್ನು ನಮ್ಮ ಸಿಬ್ಬಂದಿಯವರೇ ಈಗಾಗಲೇ ಬಹಳ ತಪ್ಪುಮಾಡಿದ್ದಾರೆ. ಇದನ್ನು ಲಿಖಿತ ಮೂಲಕ ಉತ್ತರ ಕೊಡತಕ್ಕಂಥ ಪ್ರಶ್ನೆಯಾಗಿ ಅವರು ಮಾಡಬೇಕಾಗಿತ್ತು. ಅವರು ಕೇಳಿರತಕ್ಕಂಥ ಪ್ರಶ್ನೆಗೆ ಉತ್ತರ ಕೊಡಬೇಕಾದರೆ ಒಂದು ಗಂಟೆ ಬೇಕಾಗುತ್ತದೆ.

ಶ್ರೀ ಡಿ. ಮಂಜುನಾಥ್ : ಅವರು ಏನು ಪ್ರಶ್ನೆ ಕೇಳಿದ್ದಾರೆ ಅದಕ್ಕೆ ಉತ್ತರ ಕೊಟ್ಟಿದ್ದಾರೆ. ಅವರು ಇನ್ನೂ ವಿವರಗಳನ್ನು ಕೇಳುತ್ತಿರುತ್ತಾರೆ, ವಿವರಗಳನ್ನು ಬೇಕಾದರೆ ನಾನು ಆಮೇಲೆ ಕಳುಹಿಸಿಕೊಡುತ್ತೇನೆ.

ಶ್ರೀ ಎಂ.ಹೆಚ್. ಜಯಪ್ರಕಾಶ್ ನಾರಾಯಣ್ : ಇಲ್ಲಿ ಪ್ರಶ್ನೆ ಇಷ್ಟೆ ಎಷ್ಟು ನೇಮಕ ಮಾಡಿದ್ದೀರಿ. ಎಷ್ಟು ಬ್ಯಾಕ್‌ಲಾಗ್ ಹುದ್ದೆಗಳು ಇವೆ, ಇದು ಯಾವಾಗ ಜಾರಿಗೆ ಬಂತು? ಕೇವಲ 12 ಇನ್‌ಸ್ಟಿಟೂಶನ್ಸ್ ಇವೆ. ಅದು ಕಷ್ಟರಾದ ಪ್ರಶ್ನೆ ಅಲ್ಲ, ಅದು ಗಂಟಿಗಂಟಲೆ ಉತ್ತರಿಸುವಂಥ ಅಂಶ ಅಂಥಾದ್ದರಲ್ಲಿ ಇವರೆ as a member of the community representing in the Cabinet can you not protect the interest of the Scheduled Castes ಎನ್ನತಕ್ಕಂಥ ಪ್ರಶ್ನೆ ಇಲ್ಲಿ ಬರುತ್ತದೆ. ತಾವು ದಯವಿಟ್ಟು ಈವರೆಗೂ ಕೈಗೊಂಡಿರುವ ಕ್ರಮಗಳು ಏನು ಎಂದು ಕೇಳಿದರೆ ಸಂಬಂಧಪಟ್ಟ ಅನುದಾನಿತ ಶಿಕ್ಷಣ ಸಂಸ್ಥೆಗಳು ಬ್ಯಾಕ್‌ಲಾಗ್ ಹುದ್ದೆಗಳನ್ನು ತುಂಬಲು ಸರ್ಕಾರದವರು ಪರಿಶೀಲಿಸುತ್ತೀರಾ ಎಂದು ಕೇಳಿದ್ದಕ್ಕೆ 'ಹೌದು' ಎಂದು ಹೇಳಿದ್ದೇನೆ. ಈಗಾಗಲೇ ನಾವು ಸಂಬಂಧಪಟ್ಟವರಿಗೆ ಬ್ಯಾಕ್‌ಲಾಗ್ ಹುದ್ದೆಗಳನ್ನು ತುಂಬಬೇಕು ಎಂದು ಹೇಳಿದ್ದೇನೆ. ಆದರೆ ವಿವರಗಳನ್ನು ಕೇಳುತ್ತಿದ್ದಾರೆ ಎಷ್ಟು ಜನ ಪ್ರೊಫೆಸರ್ಸ್, ಎಷ್ಟು ಜನ ರೀಡರ್ಸ್, ಎಷ್ಟು ಜನ ಲೆಕ್ಚರರ್ಸ್ ಎಂದು. ಅದಕ್ಕೆ ಬೇಕಾದರೆ ಉತ್ತರವನ್ನು ಒದಗಿಸಿಕೊಡುತ್ತೇನೆ.

ಶ್ರೀ ಎಂ.ಹೆಚ್. ಜಯಪ್ರಕಾಶ್ ನಾರಾಯಣ್ : ಖಚಿತವಾದ ಪ್ರಶ್ನೆ ಇದೆ ನೋಡಿ. ಪರಿಶಿಷ್ಟ ಜಾತಿ ಪರಿಶಿಷ್ಟ ಪಂಗಡ : ವರ್ಗದವರ ಸಂಖ್ಯೆ ಎಷ್ಟು, ಬೋಧಕ ಮತ್ತು ಬೋಧಕೇತರರ ಶೇಕಡವಾರು ಪ್ರತ್ಯೇಕ ಪಟ್ಟಿಯನ್ನು ಒದಗಿಸುವುದು ಎಂದು ಇದೆ. ಇದೇ ಅವರ ಪ್ರತ್ಯೇಕ ಪಟ್ಟಿ. I want specific answer from the Hon'ble Ministe whether it is possible to supply that reply or not..

ಶ್ರೀ ಡಿ. ಮಂಜುನಾಥ್ : ಅವರು ಕೇಳಿರುವ ಪ್ರಶ್ನೆಗಳಿಗೆ ಮಾತ್ರ ನಾನು ಉತ್ತರವನ್ನು ಹೇಳಿದ್ದೇನೆ. ಅವರು ಇನ್ನು ಏನೇನು ಕೇಳುತ್ತಾರೆ. ಅದಕ್ಕೆಲ್ಲಾ ಉತ್ತರವನ್ನು ಒದಗಿಸಿಕೊಡುತ್ತೇನೆ.

MR. SPEAKER : Separate list of percentage of teaching and non-teaching staff has it been supplied to the hon. Member ಕೇಳಿದ್ದಾರಲ್ಲ ಕೊಟ್ಟಿದ್ದೀರಾ?

ಶ್ರೀ ಡಿ. ಮಂಜುನಾಥ್ : ಹೌದು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಅಧ್ಯಕ್ಷರೇ, ಅವರು ಕೇಳತಕ್ಕಂಥದ್ದು ಇಷ್ಟೆ. ಟೀಚಿಂಗ್ ಅಂಡ್ ನಾನ್ ಟೀಚಿಂಗ್‌ದು, ಏಕೆಂದರೆ ಅನೇಕ ಸಂಸ್ಥೆಗಳಲ್ಲಿ ಏನಾಗುತ್ತಿದೆ ಅಂದರೆ ಈ ಜವಾನರು, ಅಟೆಂಡರ್ಸ್ ಇಂತಹ ಪೋಸ್ಟ್‌ಗಳನ್ನು ತುಂಬಿ ನಾವು ಪರ್‌ಸೆಂಟೇಜ್ ಮೈಂಟೇನ್ ಮಾಡಿದ್ದೇವೇ ಎಂದು ಹೇಳುತ್ತಾರೆ. ಅದಕ್ಕಾಗಿ ಅವರು ಪ್ರತ್ಯೇಕವಾಗಿ ಕೇಳಿದ್ದುದು ಏನೆಂದರೆ, ಟೀಚಿಂಗ್‌ನಲ್ಲಿ ಎಷ್ಟಿದ್ದಾರೆ? ನಾನ್ ಟೀಚಿಂಗ್‌ನಲ್ಲಿ ಎಷ್ಟಿದ್ದಾರೆ ಎಂದು ಇದು ಒಂದು. ಎರಡನೆಯದಾಗಿ ತಾವೇನು ಹೇಳಿದಿರಿ ಪರಿಶೀಲಿಸುತ್ತೇವೆ ಎಂದು. ಬ್ಯಾಕ್‌ಲಾಗ್ ಇದೆ ಅದನ್ನು ಮಾಡಿಸುತ್ತೇನೆ ಎಂದು ಹೇಳಿ. ಇದರಲ್ಲಿ ಪರಿಶೀಲನೆ ಮಾಡುವುದು ಏನಿದೆ. ಪರೀಶೀಲನೆಯನ್ನು ಮಾಡುವ ಪ್ರಶ್ನೆಯೇ ಇಲ್ಲ.

ಶ್ರೀ ಡಿ. ಮಂಜುನಾಥ್ : ಇದು ಏನಾಗಿದೆ, ಅನುದಾನ ಪಡೆಯುತ್ತಿರುವ ಈ ಸಂಸ್ಥೆಗಳಲ್ಲಿ ಕೆಲಸ ಮಾಡುತ್ತಿರುವ ನೌಕರರು ಎಷ್ಟು? ಇದಕ್ಕೆ ಉತ್ತರವನ್ನು ಕೊಟ್ಟಿದ್ದೇವೆ. ಹಾಗೂ ಅದರಲ್ಲಿ ಪರಿಶಿಷ್ಟ ಜಾತಿ ಮತ್ತು ವರ್ಗದವರ ಸಂಖ್ಯೆ ಎಷ್ಟು? ಅದಕ್ಕೆ ಉತ್ತರವನ್ನು ಕೊಟ್ಟಿದ್ದೇವೆ. ಬೋಧಕ ಮತ್ತು ಬೋಧಕೇತರರ ಶೇಕಡಾವಾರು ಪ್ರತ್ಯೇಕ ಪಟ್ಟಿಯನ್ನು ಒದಗಿಸಿಕೊಟ್ಟಿದ್ದೇವೆ. ನೀವು ಶೇಕಡಾವಾರು ಕೇಳಿದ್ದೀರಿ. ಶೇಕಡಾವಾರು ಒದಗಿಸಿದ್ದೇವೆ. ಈ ಬಗ್ಗೆ ವಿವರವಾದ ಮಾಹಿತಿ ಬೇಕಾದರೆ ನಾನು ನಿಮಗೆ ಕಳುಹಿಸಿಕೊಡುತ್ತೇನೆ.

ಶ್ರೀ ಎಂ.ಎಚ್. ಜಯಪ್ರಕಾಶ್ ನಾರಾಯಣ್ : ಶೇಕಡಾವಾರು ಕೊಟ್ಟಿದ್ದಾರೆಯೇ ಹೊರತು ಯಾವ ಕಾಲೇಜಿನಲ್ಲಿ ಎಲ್ಲಿ ಬ್ಯಾಕ್‌ಲಾಗ್ ವೇಕೆನ್ಸಿ ಎಷ್ಟಿದೆ ಎನ್ನತಕ್ಕ ಇನ್‌ಫರ್‌ಮೇಷನ್ ನಿಮ್ಮ ಇಲಾಖೆಯವರು ಒದಗಿಸಿಲ್ಲ. ಬೋಧಕ ವರ್ಗ ಎಷ್ಟಿದೆ? ಯಾವ ಯಾವ ವರ್ಗ ಎಷ್ಟಿದೆ ಎಂಬುದರ ಪಟ್ಟಿ ಕೊಡಿ. ನನ್ನ ಖಚಿತವಾದ ಪ್ರಶ್ನೆಗೆ ಖಚಿತವಾದ ಉತ್ತರವನ್ನು ಒದಗಿಸಿಲ್ಲ. ದಯವಿಟ್ಟು ಮುಂದೆಯಾದರೂ ಅದನ್ನು ಒದಗಿಸಿಕೊಡಲಿಕ್ಕೆ ವಿರ್ಪಾಡು ಮಾಡಿ.

ಅಧ್ಯಕ್ಷರು : ನೀವು ಪರ್ಸೆಂಟೇಜ್ ಕೇಳಿದ್ದೀರಿ. ಅದನ್ನು ಒದಗಿಸಿದ್ದಾರೆ. ಮಾನ್ಯ ಉನ್ನತ ಶಿಕ್ಷಣ ಮಂತ್ರಿಗಳು ದಯಮಾಡಿ ಮಾನ್ಯ ಸದಸ್ಯರಿಗೆ ಬೇಕಾದ ಹೆಚ್ಚುವರಿ ಮಾಹಿತಿಯನ್ನು ಒದಗಿಸಿಕೊಡಿ.

ಶ್ರೀ ಡಿ. ಮಂಜುನಾಥ್ : ಆಯಿತು ಒದಗಿಸುತ್ತೇನೆ.

ಆಂಗ್ಲೋ ಇಂಡಿಯನ್ನರಿಗೆ ಶಿಕ್ಷಣದಲ್ಲಿ ರಿಯಾಯಿತಿ

286 - ಶ್ರೀ ಜಿ.ಎ. ಫರ್ನಾಂಡೀಸ್ (ನಾಮನಿರ್ದೇಶಿತ) : ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಆಂಗ್ಲೋ ಇಂಡಿಯನ್ ಕೋಮಿನವರಿಗೆ ಪ್ರಸ್ತುತ ನೀಡಲಾಗುತ್ತಿರುವ ಸೌಲಭ್ಯಗಳು?

ಆ) ಮೂಲತಃ ಎಂದಿನಿಂದ ಈ ಸೌಲಭ್ಯಗಳನ್ನು ವಿಸ್ತರಿಸಲಾಗಿದೆ? ಈ ಸೌಲಭ್ಯದಿಂದ ಇದುವರೆವಿಗೂ ಎಷ್ಟು ಮಂದಿ ಆಂಗ್ಲೋಇಂಡಿಯನ್ ವಿದ್ಯಾರ್ಥಿಗಳು ಅನುಕೂಲ ಪಡೆದಿರುತ್ತಾರೆ?

ಇ) 1989 ರಿಂದ 1994ರವರೆಗೆ ಯಾವುದಾದರೂ ಹೆಚ್ಚುವರಿ ಸೌಲಭ್ಯವನ್ನು ಆಂಗ್ಲೋ ಇಂಡಿಯನ್ ಕೋಮಿನವರಿಗೆ ವಿಸ್ತರಿಸಲಾಗಿದೆಯೇ? ಹಾಗಿದ್ದಲ್ಲಿ ವಿವರಗಳನ್ನು ನೀಡಿ.

ಶ್ರೀ ಹೆಚ್.ಜಿ. ಗೋವಿಂದೇಗೌಡ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು):

ಅ) ಕರ್ನಾಟಕದಲ್ಲಿ ರಾಜ್ಯದಲ್ಲಿ 1 ರಿಂದ 10ನೇ ತರಗತಿಯಲ್ಲಿ ವ್ಯಾಸಂಗ ಮಾಡುವ ಆಂಗ್ಲೋ ಇಂಡಿಯನ್ ವಿದ್ಯಾರ್ಥಿಗಳಿಗೆ ರಾಜ್ಯ ಸರ್ಕಾರದಿಂದ ಬೋಧನಾ, ಪ್ರಯೋಗಾಲಯ, ಗ್ರಂಥಾಲಯ ಪ್ರವೇಶ, ವಿಶೇಷ ವಾಚನಾಲಯ, ಶ್ರವಣ ದರ್ಶನ ಮತ್ತು ಕ್ರೀಡಾ ಶುಲ್ಕಗಳನ್ನು ಮರುಪಾವತಿ ಮಾಡಲಾಗುತ್ತಿದೆ.

1987-88ರಿಂದ ಜಾರಿಗೊಳಿಸಿದೆ.

ಪ್ರತಿವರ್ಷ ಪ್ರಯೋಜನ ಪಡೆದ ವಿದ್ಯಾರ್ಥಿಗಳ ಪಟ್ಟಿಯು ಈ ಕೆಳಕಂಡಂತೆ ಇದೆ.

ವರ್ಷ	ಸಂಖ್ಯೆ
1987-88	714
1988-89	1157
1989-90	983
1990-91	989
1991-92	683
1992-93	982
1993-94	997
1994-95	765